# <u>ವೆಂಕಟರಮಣ ವೇದಾಂತ ನಿನ್ನಯ ಪಾದ</u>

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 152.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 278.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 521.
4. **Note:** The wordings mentioned without highlights are as per Ref. 1. The wordings mentioned yellow highlights are as per Ref. 2. The wordings mentioned in green highlights are as per Ref. 3.
5. **Note:** The Singer has followed almost similar wordings as in Ref. 2.

ರಾಗ: ಸಾವೇರಿ ತಾಳ: ಅಟ

| | |
|---|---|
| ವೆಂಕಟ ರಮಣ ವೇದಾಂತ ನಿನ್ನಯ ಪಾದ | ವೆಂಕಟ ರಮಣ ವೇದಾಂತ ನಿನ್ನಯ ಪಾದ |
| ಪಂಕಜ ಕಂಡ ಮೇಲೆ | ಪಂಕಜ ಕಂಡ ಮೇಲೆ ಇಂಥ |
| ಮಂಕು ಮಾನವರ ಬೇಡಿಸುವುದು ಉಚಿತವೆ | ಮಂಕು ಜನರ ಬೇಡಿಸುವುದುಚಿತವೆ |
| ಶಂಖ ಚಕ್ರಾಂಕಿತನೆ ॥ ಪ ॥ | ಶಂಖ ಚಕ್ರಾಂಕಿತನೆ |
| | |
| ಕ್ಷೀರ ಸಾಗರವ ಪೊಂದಿರ್ದವ ಮಥಿಸಿದ | ಕ್ಷೀರ ಸಾಗರ ಮಥನಿಸಿ ಪೊಂದಿದಾತಗೆ |
| ನೀರು ಮಜ್ಜಿಗೆ ಕಾಣನೆ | ನೀರು ಮಜ್ಜಿಗೆ ಕಡವೆ |
| ಚಾರು ಕಲ್ಪವೃಕ್ಷದಡಿಯೊಳು ಕುಳಿತಿರ್ದು | ಚಾರು ಕಲ್ಪವೃಕ್ಷದಡಿಯಲ್ಲಿ ಕುಳಿತಂಗೆ |
| ತೋರ ತಿಂತ್ರಿಣಿ ಬಯಕೆಯೆ ॥ 1 ॥ | ದೋರ ತಿಂತ್ರಿಣಿ ಬಯಕೆ |
| | |
| ಸಾರ ಭೂಪಾಲನ ಸೂನು ವೆನಿಸಿಕೊಂಡು | ಸಾರ್ವ ಭೂಪಾಲನ ಸೂನುವೆನಿಸಿಕೊಂಡು |
| ಸೂರೆಗೂಳಿನ ತಿರುಕೇ | ಸೋರೆಕೂಳಿನ ತಿರುಕೇ |
| ನಾರಿ ಲಕ್ಷ್ಮೀಕಾಂತ ನಿನ್ನ ಪೊಂದಿರ್ದಗೆ | ನಾರಿ ಲಕ್ಷ್ಮೀಕಾಂತ ನಿನ್ನ ನಂಬಿದವಗೆ |
| ದಾರಿದ್ರ್ಯದಟ್ಟುಳಿಯೆ ॥ 2 ॥ | ದಾರಿದ್ರ್ಯದಂಜಿಕೆಯೆ |
| | |
| ಸುರ ನದಿಯೊಳು ಮಿಂದು ಸುಖಿಯಾದ ಬಳಿಕಿನ್ನು | ಸುರ ನದಿಯಲಿ ಮಿಂದು ಶುಚಿಯಾದ ಬಳಿಕಿನ್ನು |
| ದುರಿತಗಳಟ್ಟುಳಿಯೆ | ತೀರ್ಥದ ಅಟ್ಟುಳಿಯೆ |
| ಪರಮ ಪುರುಷ ನಿನ್ನ ಪೊಂದಿದ್ದ ದಾಸರ್ಗೆ | ಕರುಣಾನಿಧಿಯೆಂದು ಮೊರೆಹೊಕ್ಕ ದಾಸಗೆ |
| ಅರಿಗಳ ಭೀತಿಯುಂಟೆ ॥ 3 ॥ | ದುರಿತದ ದುಷ್ಫಲವೆ |

ಗರುಡನ ಮಂತ್ರವ ಕಲಿತು ಜಪಿಸುವವಗೆ
ಉರಗನ ಹಾವಳಿಯೆ
ಹದಿಯಿಕ್ಕೆ ಪಕ್ಕದಿ ಮನೆ ಕಟ್ಟಿದಾತಗೆ
ಕರಿಗಳ ಭೀತಿಯುಂಟೆ || 4 ||

ಗರುಡನ ಮಂತ್ರವ ಕಲಿತು ಜಪಿಸುವಂಗೆ
ಉರಗನ ಹಾವಳಿಯೆ
ಹರಿಯ ಪಕ್ಕದೊಳು ಮನೆ ಕಟ್ಟಿದಾತಂಗೆ
ಕರಿಗಳ ಭೀತಿಯುಂಟೆ

ಪರಮ ಪುರುಷ ಸುಗುಣಾತ್ಮಕನೇ ನಿನ್ನ
ಮರೆಹೊಕ್ಕೆ ಕಾಯೊ
ಉರಗಾದ್ರಿವಾಸ ಶ್ರೀ ಪುರಂದರ ವಿಠ್ಠಲ
ಪರಬ್ರಹ್ಮ ನಾರಾಯಣ || 5 ||

ಪರಮ ಪುರುಷ ಸುಗುಣಾತ್ಮಕ ನೀನೆಂದು
ಮರೆಹೊಕ್ಕೆ ಕಾಯೊ ಎನ್ನ
ಉರಗಾದ್ರಿವಾಸ ಶ್ರೀ ಪುರಂದರ ವಿಠ್ಠಲನೆ
ಪರಬ್ರಹ್ಮ ನಾರಾಯಣ

**Note:** The below given lyrics are as per Ref. 3 above:

ರಾಗ: ಆರಭಿ ತಾಳ: ಅಟ

ವೆಂಕಟ ರಮಣ ವೇದಾಂತ ನಿನ್ನಯ ಪಾದ
ಪಂಕಜ ಕಂಡ ಮೇಲೆ
ಮಂಕು ಮಾನವರ ಬೇಡಿಸುವುದುಚಿತವೆ
ಶಂಖ ಚಕ್ರಾಂಕಿತನೆ || ಪ ||

ಕ್ಷೀರ ಸಾಗರವ ಪೊಂದಿದವ ಮಥಿಸಿದ
ನೀರು ಮಜ್ಜಿಗೆ ಕಾಣನೆ
ಚಾರು ಕಲ್ಪವೃಕ್ಷದಡಿಯಲ್ಲಿ ಕುಳಿತವಗೆ
ದೋರೆ ತಿಂತ್ರಿಣಿ ಬಯಕೆಯೆ || 1 ||

ಸಾರ್ವ ಭೂಪಾಲನ ಸೂನು ಎನಿಸಿದವಗೆ
ಸೂರೆಗೂಳಿನ ತಿರುಕೇ
ನಾರಿ ಲಕ್ಷ್ಮೀಕಾಂತ ನಿನ್ನ ಪೊಂದಿದವಗೆ
ದಾರಿದ್ರ್ಯದಟ್ಟುಳಿಯೆ || 2 ||

ಸುರ ನದಿಯಲಿ ಮಿಂದು ಶುಚಿಯಾದ ಮೇಲಿನ್ನು
ದುರಿತಗಳಟ್ಟುಳಿಯೆ
ಪರಮ ಪುರುಷ ನಿನ್ನ ಪೊಂದಿರ್ದ ದಾಸರ್ಗೆ
ಅರಿಗಳ ಭೀತಿಯುಂಟೆ || 3 ||

ಗರುಡನ ಮಂತ್ರವ ಕಲಿತು ಜಪಿಸುವಗೆ
ಉರಗನ ಹಾವಳಿಯೆ
ಹರಿ ಪಕ್ಕದೊಳು ಮನೆ ಕಟ್ಟಿದ ನರನಿಗೆ
ಕರಿಗಳ ಭೀತಿಯುಂಟೆ || 4 ||

ಪರಮ ಪುರುಷ ಗುಣಪೂರ್ಣ ನೀನಹುದೆಂದು
ಮರೆಹೊಕ್ಕೆ ಕಾಯೊ ಎನ್ನ
ಉರಗಾದ್ರಿವಾಸ ಶ್ರೀ ಪುರಂದರ ವಿಠ್ಠಲ
ಪರಬ್ರಹ್ಮ ನಾರಾಯಣ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಹಿರಿದಾದ ದೈವವನ್ನು ನಂಬಿದ ಮೇಲೆ ಹುಲು ಮಾನವರ ಆಸರೆಯನ್ನು ಅರಸಬೇಕಾದುದಿದೆಯೆ? ಪಾಲ್ಗಡಲನ್ನೇ ಪಡೆದವನಿಗೆ ನೀರು ಮಜ್ಜಿಗೆಯ ಹಂಬಲವೇಕೆ? ಕಲ್ಪವೃಕ್ಷದಡಿ ಕುಳಿತಾಗ ಒಣ ಹುಣಸೇ ಹಣ್ಣಿನ ಬಯಕೆಯೆ? ಚಕ್ರವರ್ತಿಯ ಮಗನಾದವನಿಗೆ ಭಿಕ್ಷೆಯ ಊಟವೆ? ಲಕ್ಷ್ಮಿಯ ಗಂಡನನ್ನೇ ಮೊರೆಹೊಕ್ಕ ಮೇಲೆ ಬಡತನವೆಲ್ಲಿಯದು? ಗಂಗೆಯಲ್ಲಿ ಸ್ನಾನ ಮಾಡಿದ ಮೇಲೆ ಪಾಪಗಳು ಉಳಿಯುವುದೇ? ದೇವರನ್ನು ನಂಬಿದವರಿಗೆ ಹಗೆಗಳ ಹೆದರಿಕೆಯೇ? ಗರುಡ ಮಂತ್ರ ಬಲ್ಲವರಿಗೆ ಹಾವಿನ ಅಂಜಿಕೆಯೇ? ಸುತ್ತಲೂ ಕಂದಕವನ್ನು ತೋಡಿ ನಡುವೆ ಮನೆ ಕಟ್ಟಿಕೊಂಡ ಮೇಲೆ ಆನೆಗಳ ಹೆದರಿಕೆಯೆ?

ಹರಿದಾಸರಲ್ಲಿ ನರಸೇವೆ ಮಾಡಬಾರದೆಂಬ ವಿಧಿಯಿದೆ. ಪುರಂದರ ದಾಸರ ಗುರುಗಳಾದ ವ್ಯಾಸರಾಯ ಸ್ವಾಮಿಗಳೂ ಒಂದು ಪದದಲ್ಲಿ:

> "ಪರಮ ಪದವೀವ ಸಿರಿ ಕೃಷ್ಣನಿರಲಾಗಿ
> ನರರ ಸೇವಿಸಬೇಡವೊ ಎಂದೆಂದಿಗು"

ಎಂದು ಉಪದೇಶಿಸಿದ್ದಾರೆ.

**ವೇದಾಂತ** = ವೇದಗಳ ಆದರ್ಶ

**ಮಂಕು** = ಅಜ್ಞಾನಿ

**ಪರಬ್ರಹ್ಮ** = ಪರಾತ್ಪರ, ಬ್ರಹ್ಮ ರುದ್ರಾದಿಗಳಿಗಿಂತ ಶ್ರೇಷ್ಠನಾದವನು ಶ್ರೀ ಹರಿ

**ಪಂಕಜ** = ಕಮಲ

**ದೋರೆತಿಂತ್ರಿಣಿ** = ಹುಣಿಸೆಯ ದೋರೆಗಾಯಿ

**ತೋರ** = ದಪ್ಪ, ದೊಡ್ಡ

**ತಿಂತ್ರಿಣಿ** = ಹುಣಸೆ, ತಿಂತಿಡಿ

**ಸಾರ್ವ ಭೂಪಾಲ** = ಸಾರ್ವಭೌಮ, ಚಕ್ರವರ್ತಿ

**ಸೋರೆಕೂಳು** = ಮಡಕೆ ಹಿಡಿದುಕೊಂಡು ಬೇಡುವ ಕೂಳು

**ಸೂನು** = ಮಗ

**ಅಟ್ಟುಳಿ** = ಜನಸಂದಣಿ, ಜಂಗುಳಿ, ಕಾಟ, ಪೀಡೆ

**ಅರಿ** = ಶತ್ರು, ದೋಷ, ಆಯುಧ

**ಹದಿ** = ತಗ್ಗು, ತೋಡು, ಬುನಾದಿ

**ಉರಗ** = ಹಾವು, ಶೇಷ, ಸರ್ಪ, ಕಾಳಿಂಗ

**ಉರಗಾದ್ರಿ ವಾಸ** = ಶೇಷಗಿರಿ ವಾಸ = ಶೇಷಾಚಲ ವಾಸ, ಶ್ರೀನಿವಾಸ, ವೆಂಕಟ ರಮಣ

**ಹರಿ** = ಸಿಂಹ

**ಸುಗುಣಾತ್ಮಕ** = ಕಲ್ಯಾಣ ಗುಣಪೂರ್ಣ

**Classification:** Keerthane
**Ankita:** Sri Purandara Vittala
**Location:** Tirupati
**Category:** Vishnu Stuti, Bhakti, Aartha Bhava.
**Sub-Category:** Vishnu, uraga, parabrahma, srinivasa, gaja, garuda, nadi, mantra, Lakshmi, shatru, japa, Samudra, kalpavruksha, padma, nara, shankha, chakra, veda, shesha, jana, halu, Ase, bhaya, karuna, papa, Krishna, mane,
**Pravachana:** NA
**Explanation:** NA